## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1275 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 29-12-2022 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಎಷ್ಟು ಸರಾಯಿ ಅಂಗಡಿಗಳು ಶಾಲೆ ಮತ್ತು ದೇವಸ್ಥಾನಗಳ ಹತ್ತಿರ ಇವೆ; ಅವು ಯಾವುವು? (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ 2022-23ನೇ ಸಾಲಿಗೆ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸನ್ನದುಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರ ಉಲ್ಲಂಘನೆ ಮಾಡಿ ಶಾಲೆ ಮತ್ತು ದೇವಸ್ಥಾನಗಳ ಹತ್ತಿರ ಕಾರ್ಯನಿರ್ವಹಿಸುತ್ತಿರುವುದಿಲ್ಲ. |
| ಆ) | ಇವುಗಳಲ್ಲಿ ಎಷ್ಟು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿವೆ. | |
| ಇ) | ಬೀದರ್ ನಗರದಲ್ಲಿ ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತ, ಹರಳಯ್ಯಾ ವೃತ್ತ, ಮಡಿವಾಳ ಮಾಚಿದೇವ ವೃತ್ತಗಳಲ್ಲಿ ಸರಾಯಿ ಅಂಗಡಿಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವರುಗಳು ಸರ್ಕಾರದ ನಿಯಮ ಪಾಲಿಸುತ್ತಿದ್ದಾರೆಯೇ; | ಬೀದರ್ ನಗರದಲ್ಲಿ ಅಂಬೇಡ್ಕರ ವೃತ್ತ, ಬಸವೇಶ್ವರ ವೃತ್ತ, ಹರಳಯ್ಯಾ ವೃತ್ತ ಹಾಗೂ ಮಡಿವಾಳ ಮಾಚಿದೇವ ವೃತ್ತಗಳಲ್ಲಿ ಅಧಿಕೃತ ಮದ್ಯದ ಸನ್ನದುಗಳು ಕಾರ್ಯನಿರ್ವಹಿಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಈ ಪ್ರದೇಶಗಳಲ್ಲಿನ ಸನ್ನದುಗಳು ಅಬಕಾರಿ ನಿಯಮಗಳಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿವೆ.<br><br>ಈ ಸನ್ನದು ಮಳಿಗೆಗಳ ತಪಾಸಣೆ ಕೈಗೊಂಡಂತಹ ಸಂದರ್ಭದಲ್ಲಿ ಕಂಡುಬಂದ ಸನ್ನದು ಷರತ್ತುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಸನ್ನದುಗಳ ವಿರುದ್ಧ ಒಟ್ಟು 24 ಪ್ರಕರಣಗಳನ್ನು ದಾಖಲಿಸಿ ರೂ.4,25,000/- ದಂಡವನ್ನು ವಿಧಿಸಲಾಗಿರುತ್ತದೆ. 2022-23ನೇ ಸಾಲಿನಲ್ಲಿ ಒಟ್ಟು 05 ಪ್ರಕರಣಗಳನ್ನು ದಾಖಲಿಸಲಾಗಿದೆ. |

| | | |
|---|---|---|
| | | ದಾಖಲಿಸಿದ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ. |
| ಈ) | ಸರ್ಕಾರದ ನಿಯಮದಂತೆ ಇಂತಿಷ್ಟು ಮೀಟರ್ ಒಳಗೆ ಶಾಲಾ ಕಾಲೇಜು ಮತ್ತು ದೇವಸ್ಥಾನ ಮಹಾನ್ ಶರಣರು ಹಾಗೂ ಪುರುಷರ ಮತ್ಥಳಿ ಸುತ್ತಲು ಸರಾಯಿ ಅಂಗಡಿಗಳು ಇರಬಾರದೆಂಬ ನ್ಯಾಯಾಲಯದ ಸುತ್ತೋಲೆಗಳಿದ್ದರೂ ಕೂಡ ಬೀದರ್‌ನಲ್ಲಿ ಈ ಅಂಗಡಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದು ಹೇಗೆ; ಪರವಾನಗಿ ನೀಡಿರುವುದು ಸರಿಯೇ; ಪರವಾನಗಿ ನೀಡಿದ ಅಧಿಕಾರಿಗಳ್ಯಾರು? | ಪ್ರಸ್ತುತ ಚಾಲ್ತಿಯಲ್ಲಿರುವ ಅಬಕಾರಿ ನಿಯಮಗಳಲ್ಲಿ ಮಹಾನ್ ಶರಣರು ಹಾಗೂ ಪುರುಷರ ಮತ್ಥಳಿಗಳು ಆಕ್ಷೇಪಣಾ ಸ್ಥಳ ಎಂಬ ವ್ಯಾಖ್ಯಾನಕ್ಕೆ ಒಳಪಟ್ಟಿರುವುದಿಲ್ಲ.<br><br>ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಪ್ರಧಾನವಾಗಿ ವಾಸಿಸುವ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ. ಹಾಗೂ ದಿನಾಂಕ:01-07-2016ರಕ್ಕಿಂತ ಮುಂಚೆ ಅದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ತಯಾರಿಕಾ ಮದ್ಯ ಸನ್ನದುಗಳಿಗೆ ಮೇಲಿನ ನಿಬಂಧನೆಗಳ ಅನ್ವಯಿಸುವಿಕೆಯಿಂದ ವಿನಾಯತಿಯನ್ನು ನೀಡಲಾಗಿದೆ.<br><br>ಈ ನಿಯಮ/ನಿಬಂಧನೆಯನ್ನು ಉಲ್ಲಂಘಿಸಿ ಬೀದರ್ ಜಿಲ್ಲೆಯಲ್ಲಿ ಯಾವುದೇ ಭಾರತೀಯ ತಯಾರಿಕಾ ಮದ್ಯ ಸನ್ನದುಗಳಿಗೆ ಮಂಜೂರಾತಿಯನ್ನು ನೀಡಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. |

ಆಇ 112 ಇಎಲ್‌ಕ್ಯೂ 2022

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 26/12/2022 04:36 PM